ಪುಂಗಿ ಊದಬೇಡ. ನಿನ್ನ ಪ್ರಾಣ ತೆಗಿಯಾಕೆ ಗಿಳಿಯೇನು ಹುಲಿ ಸಿಂಹ ಅಲ್ಲ. ಐದು ರೂಪಾಯಿ ಮೇಲೆ ಚಕ್ಕಾಸು ಕೊಡಲ್ಲ. ಫಾರೆಸ್ಟ್ ಡಿಪಾರ್ಟ್‌ಮೆಂಟಿಗೆ ಪುಕಾರಾದ್ರೆ ನಿನ್ನ ಒದ್ದು ಒಳಗೆ ಹಾಕ್ತಾರೆ. ಇದೇನು ಸಾರು ಮಾಡ್ಕೊಂಡು ತಿನ್ನೊ ಐಟಂ ಅಲ್ಲ. ಸುಮ್ಮನೆ ಕೊಟ್ಟು ಹೋಗು" ಎಂದು ಕುಮಾರ ವ್ಯವಹಾರ ಕುದುರಿಸುತ್ತಿದ್ದ. ಸುಂಕಣ್ಣನಿಗೆ ಅದನ್ನು ಮಾರದೆ ಅನ್ಯ ಮಾರ್ಗವಿರಲಿಲ್ಲ. ಮೇಲಾಗಿ ಅರಣ್ಯ ಇಲಾಖೆ, ಕೇಸು ಎಂದೆಲ್ಲಾ ಹೇಳಿ ಹೆದರಿಸಿದ್ದರಿಂದ ಕೊಂಚ ವಿಚಲಿತನಾದ ಅವನು, "ತಿಳಿದು ನೀವೆ ಮೇಲೆ ಒಂದಿಷ್ಟು ಹಾಕ್ಕೊಡಿ" ಎಂದಾಗ ಏಳು ರೂಪಾಯಿಗೆ ಗಿಳಿ ಮಾರಾಟ ಪರಿಸಮಾಪ್ತಿ ಕಂಡಿತು.

ಆ ಗಿಳಿ ಗಂಡೋ ಹೆಣ್ಣೊ ಎಂದು ಕಂಡು ಹಿಡಿಯುವ ತಜ್ಞರು ನಮ್ಮಲ್ಲಿ ಯಾರೂ ಇರಲಿಲ್ಲ. ರೊಕ್ಕ ಕೊಟ್ಟು ಕೊಂಡ ಕುಮಾರ ಇದು ಹೆಣ್ಣು ಗಿಳಿಯೇ ಎಂದು ಬಲವಾಗಿ ವಾದಿಸಿದ. ಮೇಲಾಗಿ ಏನೊಂದೂ ಕಳಕೊಳ್ಳುವುದು ಇಲ್ಲದ ನಾವೆಲ್ಲಾ ಹೌದೌದು ಎಂದು ಸುಲಭ ಒಪ್ಪಿಗೆ ಕೊಟ್ಟೆವು. ಕುಮಾರ ಅದು ಹೆಣ್ಣು ಗಿಳಿಯೇ ಎಂದು ಪ್ರಬಲವಾಗಿ ಹಟ ಹಿಡಿಯಲು ಇದ್ದ ಕಾರಣ ನಂತರ ಸ್ಪಷ್ಟವಾಯಿತು. ಆತ ಕಳೆದು ಹೋದ ತನ್ನ ಪ್ರೇಯಸಿ ಶಶಿಯ ಹೆಸರನ್ನು ಅದಕ್ಕೆಂದೇ ನಿಗದಿ ಮಾಡಬೇಕಿತ್ತು. ಹೀಗಾಗಿ ಅವನ ಮೊಂಡು ಹಟದಿಂದ ಗಂಡು ಗಿಳಿಗೆ ಹೆಣ್ಣಿನ ಹೆಸರಿನ ನಾಮಕರಣವಾಯಿತು.

ತನ್ನ ಟೈಲರ್ ಕತ್ತರಿಯಿಂದ ಕುಮಾರ ಗಿಣಿಯು ಹಾರಲಾಗದಂತೆ ಅದರ ಉದ್ದ ರೆಕ್ಕೆಗಳ ಕೊಂಚ ಕತ್ತರಿಸಿದ. ಎತ್ತರಕ್ಕೆ ಹಾರಲಾಗದ ಶಶಿ ಸುಮ್ಮನೆ ಕೂತು ಕೊಟ್ಟಿದ್ದನ್ನು ತಿಂದು ಆಗಾಗ ಕೂಗುತ್ತಿತ್ತು. ನಾವೆಲ್ಲಾ ಅಂಗೈಮೇಲೆ ಕೂರಿಸಿಕೊಂಡು, ಕೆಲವೊಮ್ಮೆ ಹೆಗಲ ಮೇಲೆ ಏರಿಸಿಕೊಂಡು ಆಟವಾಡಿಸುತ್ತಿದ್ದೆವು. ಸಂಜೆ ಹೊತ್ತಿಗೆ ಬರುವ ಎಲ್ಲಾ ಗೆಳೆಯರೂ ಅದರ ಯೋಗಕ್ಷೇಮ ವಿಚಾರಿಸುತ್ತಾ ಸಲಿಗೆಯಿಂದ ಮಾತಾಡಿಸುವ ಮಟ್ಟಕ್ಕೆ ಬಂದರು. ಬರುವಾಗ ಕೆಂಪು ಮೆಣಸಿನ ಕಾಯಿ, ಪೇರಲೆಹಣ್ಣು, ಕೆಲವರು ಜೋಳದ ತೆನೆಗಳನ್ನು ಹಿಡಿದು ಬರತೊಡಗಿದರು. ಟೈಲರ್ ಕುಮಾರನ ತಿಳಿವಿಗೆ ಬಾರದಂತೆ ಎಲ್ಲರೂ ಶಶಿಗೆ ತಂತಮ್ಮ ಪ್ರೇಯಸಿಯರ ಹೆಸರಿಟ್ಟು ಕರೆದು ಗುಟ್ಟಾಗಿ ಏನೇನೋ ಮಾತಾಡಿಸುತ್ತಿದ್ದರು. ಟೈಲರಿಂಗ್ ಮಷಿನ್ನಿನ ಸದ್ದಿನಲ್ಲಿ ಇದನ್ನು ಕುಮಾರ ಕೇಳದಿದ್ದದ್ದೆ ಒಳ್ಳೆಯದಾಯಿತು. ಆದರೂ ಈ ರಹಸ್ಯ ಹೆಚ್ಚು ದಿನ ಉಳಿಯಲಿಲ್ಲ. "ಹಲ್ಕಾ ನನ ಮಕ್ಕಳಾ! ದುಡ್ಡು ಕೊಟ್ಟಿದ್ದು ನಾನು. ಸಾಕ್ತಾ ಇರೋದು ನಾನು. ಹೆಸ್ರು ನನ್ನ ಲವ್ವರ್ದು. ನಿಮ್ಮದೇನ್ರೋ ಇಲ್ಲಿ ಉಸಾಬರಿ. ನಿಮಗಷ್ಟು ತೆವಲಿದ್ರೆ ನೀವೂ ತಂದು ಸಾಕ್ಕೊಂಡು ಡಿಂಗಾಲ್, ಮುಂಗಾಲ್ ಅಂತ ಹೆಸರಿಟ್ಟು ಕರೀರಿ. ನನ್ನ ಶಶಿ ಮೇಲೆ ಕಣ್ಣಾಕಬೇಡಿ" ಎಂದು ಗದರಿಸಿದನು. ಪ್ರೇಯಸಿಯನ್ನು ಕಳಕೊಂಡ ಮನುಷ್ಯ ಎಷ್ಟು ಭಾವುಕನಾಗಿರುತ್ತಾನೆ, ಮಾನಸಿಕವಾಗಿ ಯಾಪಾಟಿ ಭಾರವಾಗಿರುತ್ತಾನೆ ಅನ್ನೋದನ್ನು ಕುಮಾರ ಅವತ್ತು ತೋರಿಸಿದನು.

ಶಶಿ ಬಂದ ಮೇಲೆ ಕುಮಾರ ತನ್ನ ಹಾಡು, ಮಾತುಗಳ ಅವಳಿಗೆ ಒಪ್ಪಿಸುತ್ತಿದ್ದನು. ದೂರದಿಂದ ನೋಡಿದರೆ ಒಬ್ಬನೇ ಮಾತಾಡುವ ಹುಚ್ಚನಂತೆ ಕಾಣುತ್ತಿದ್ದನು. ಕುಮಾರನ ಮುಗ್ಧವಾಗಿ ನೋಡುವ ಗಿಳಿ ಅವನ ಬಗ್ಗೆ ಕರುಣೆ ಸೂಚಿಸುತ್ತಿತ್ತು. ಜತೆಗೆ ಶಶಿ ಅಂಗಡಿ ಮುಂದೆ ಬೆಳೆದ ದೊಡ್ಡ ತೆಂಗಿನ ಮರವನ್ನು ಸದಾ ತದೇಕ ಚಿತ್ತದಿಂದ ನೋಡುತ್ತಿತ್ತು. ಅದರ ಹಾರುವ ಹಂಬಲಗಳನ್ನು ಹಲವು ಸಲ ಕತ್ತರಿಸಿದ್ದ ಕುಮಾರ ಈಗ ಗಿಳಿಯ ಜತೆ ಒಡನಾಟ ಹೆಚ್ಚಿಸಿಕೊಂಡಿದ್ದ. "ನಿಮಗೊತ್ತಿಲ್ಲ. ನಿನ್ನೆ ನನ್ನ ಕಥೆ ಕೇಳಿ ಶಶಿ ಕಣ್ಣೀರು ಹಾಕಿದ್ಲು" ಎಂದೂ ಹೇಳತೊಡಗಿದ. ಕುಮಾರ ತನ್ನ ಆ ಹಳೆಯ ಪ್ರೇಯಸಿ ಶಶಿಯನ್ನು ಬಿಟ್ಟುಹಾಕಿ ಅವಳ ಜಾಗೆಯಲ್ಲಿ ಈ ಗಿಳಿಗೆ ಆಶ್ರಯ ನೀಡಿದ್ದ. ಕುಮಾರ ಅರ್ಥವಾಗದ ಮನುಷ್ಯ ಎನಿಸತೊಡಗಿದ್ದ.